# ಸಮಾರೋಪ

ಗುಡಗುಂಟಿ ಅಮರೇಶ್ವರ ದೈವನೆಲೆಗೇರಿದ ಚಾರಿತ್ರಿ ವ್ಯಕ್ತಿಯೂ ಹೌದು, ಅದೊಂದು ವಿರಳವಾದ ಹಿನ್ನೆಲೆಯ ಪವಿತ್ರ ಕ್ಷೇತ್ರವೂ ಹೌದೆಂಬುದು ಇದುವರೆಗಿನ ಅಧ್ಯಯನದಿಂದ ಸ್ಪಷ್ಟವಾದಂತಾಗಿದೆ. ಈ ಅಧ್ಯಯನದ ಫಲಶ್ರುತಿಯೆಂದರೆ, ಗುಡಗುಂಟಿ ಅಮರೇಶ್ವರ ಕ್ಷೇತ್ರದ ಪ್ರಾಚೀನತೆ ಈ ಅಧ್ಯಯನದ ಮೂಲಕ ಇನ್ನೂ ಹಿಂದಕ್ಕೆ ಹೋದುದು. ೧೨ನೆಯ ಶತಮಾನದ ಕರಡಿಕಲ್ಲಿನ ಶಾಸನ ಅಮರೇಶ್ವರವನ್ನು ಅಮರಗುಂಡ ಮಲ್ಲಿಕಾರ್ಜುನ ಕ್ಷೇತ್ರವಾಗಿ ಉಲ್ಲೇಖಿಸುವುದನ್ನು ಪ್ರಥಮತಃ ಎತ್ತಿತೋರಿದ ಮಹತ್ವ ಈ ಅಧ್ಯಯನಕ್ಕಿದೆ. ಅಮರೇಶ್ವರವನ್ನು ಅಮರಯ್ಯನ ಮೂಲಕ ಪುರಾಣವಾಗಿ ನೋಡುತ್ತ ಬರಲಾಗಿತ್ತು. ಆದರೆ ಆತನ ಐತಿಹಾಸಿಕತೆಯನ್ನು ಆತನ ಸಾಕುತಂದೆ ಆದಯ್ಯನ ಮನೆಗುರುಗಳ ಮೂಲಕ, ಅದಕ್ಕಿಂತಲೂ ಮುಖ್ಯವಾಗಿ ಬಳಗಾನೂರು ಶಾಸನಗಳ ಮೂಲಕ ಲೋಕಕ್ಕೆ ಪ್ರಕಟಿಸುವುದು ಪ್ರಥಮಬಾರಿಗೆ ಈ ಪ್ರಬಂಧದಿಂದ ಸಾಧ್ಯವಾಯಿತು. ಹೀಗೆ ಕ್ಷೇತ್ರದ ಚಾರಿತ್ರಿಕತೆ ಮತ್ತು ಅಮರೇಶ್ವರ ಎಂಬ ಕ್ಷೇತ್ರಾಧಿಪನ ಚಾರಿತ್ರಿಕತೆ ಎರಡೂ ಈ ಅಧ್ಯಯನದಿಂದ ಸಾಧ್ಯವಾದ ಅಂಶಗಳಾಗಿವೆ.

ಕರ್ನಾಟಕದ ಜನತೆಗೆ ಗುಬ್ಬಿ ಎಂಬ ತುಮಕೂರು ಜಿಲ್ಲೆಯ ಅಮರಗುಂಡ ಮಲ್ಲಿಕಾರ್ಜುನ ಕ್ಷೇತ್ರದ ಬಗೆಗ ತಿಳಿದಿತ್ತು. ಆದರೆ ಕರ್ನಾಟಕದ ಇನ್ನೊಂದು ಅಮರಗುಂಡ ಮಲ್ಲಿಕಾರ್ಜುನ ಕ್ಷೇತ್ರವು ರಾಯಚೂರು ಜಿಲ್ಲೆಯ ಲಿಂಗಸೂಗೂರಿನ ಅಮರೇಶ್ವರ ಎಂಬುದು ಈ ಅಧ್ಯಯನದಿಂದ ಮೊದಲ ಸಲ ಕರ್ನಾಟಕದ ಜನತೆಗೆ ತಿಳಿದುಬರುತ್ತಿದೆ. ಹಾಗೂ ಅಮರಗುಂಡ ಎಂಬ ಇವೆರಡು ಕ್ಷೇತ್ರಗಳ ಮೂಲವು ಶ್ರೀಶೈಲ ಮಲ್ಲಿಕಾರ್ಜುನ ಎಂಬ ಅಂಶವು ಈಗ ಸ್ಪಷ್ಟವಾಗುತ್ತಿದೆ.

೧೬ನೆಯ ಶತಮಾನದಲ್ಲೂ ಅಮರೇಶ್ವರ ಕ್ಷೇತ್ರವು ಅಮರಗುಂಡ ಮಲ್ಲಿಕಾರ್ಜುನ ಹೆಸರಿನಲ್ಲಿ ದತ್ತಿ ಸ್ವೀಕರಿಸಿರುವುದನ್ನು ದೇವರ ಭೂಪುರ ಶಾಸನದಿಂದ ಮನಗಾಣಿಸಲಾಗಿದೆ. ಅಷ್ಟು ಹೊತ್ತಿಗೆ ಅಮರಯ್ಯನ ಜಲಪವಾಡ ನಡೆದುಹೋಗಿತ್ತು ಎನಿಸುತ್ತದೆ. ಅಮರಯ್ಯನನ್ನು ಉಲ್ಲೇಖಿಸುವ ಬಳಗಾನೂರಿನ ಎರಡು ಶಾಸನಗಳ ಕಾಲ ಶಾಸನದಲ್ಲಿ ಉಕ್ತವಾಗಿರದಿದ್ದರೂ ಅವು ೧೬ನೆಯ ಶತಮಾನದ ವೇಳೆಗೆ ಹುಟ್ಟಿಕೊಂಡಿರುವ ಹಾಗೆ ಕಾಣಿಸುತ್ತದೆ. ಆದಿಮಯ್ಯನ ದೇವಸ್ಥಾನ ಮತ್ತು ಆದಿಮಯ್ಯನ ಹೆಸರಲ್ಲಿ ಶಿವಲಿಂಗದ ರೇಖಾಚಿತ್ರ ಕಾಣಿಸಿಕೊಳ್ಳಬೇಕಾದರೆ ಆ ಹೊತ್ತಿಗಾಗಲೇ

ಅಮರಯ್ಯನ ಸಾಕುತಂದೆಯಾದ ಆದಯ್ಯನು ಲಿಂಗೈಕ್ಯನಾಗಿದ್ದ ಎಂದೇ ತೋರುತ್ತದೆ. ಅಮರಯ್ಯ ಆದಯ್ಯಗಳ ಉಲ್ಲೇಖವಿರುವ ಶಾಸನ ಬಳಗಾನೂರಿನಲ್ಲಿ ದೊರೆತಿರುವುದು, ಆದಯ್ಯನ ದೇಗುಲ ಈ ಊರಲ್ಲಿ ನಿರ್ಮಾಣವಾಗಿರುವುದು ಈ ಅಂಶಗಳು ಬಳಗಾನೂರು ಎಂಬ ಗ್ರಾಮವು ಅಮರೇಶ್ವರ, ಯರಡೋಣಿ, ಭೂಪುರ ಗ್ರಾಮಗಳಷ್ಟೇ ನಾವು ಅವಶ್ಯ ಗಮನಿಸಬೇಕಾದ ನೆಲೆಯಾಗಿ ಕಾಣಿಸುತ್ತದೆ. ಆದಯ್ಯನ ದೇಗುಲ ಇರುವುದು ಅಮರೇಶ್ವರ ಬಿಟ್ಟರೆ ಬಳಗಾನೂರು ಆಗಿದ್ದು, ಯರಡೋಣಿ ಎಂಬ ಆತನ ಊರಿನಲ್ಲಿ ಆತನ ಸ್ಮರಣಿಕೆಗಳಿಲ್ಲ ಎಂಬುದು ಗಮನಾರ್ಹ. ಅಮರೇಶ್ವರಕ್ಕೆ ನಡೆದುಕೊಳ್ಳುವ ಭಕ್ತರಲ್ಲಿ ಬಳಗಾನೂರು ಭಕ್ತರೇ ಸಿಂಹಪಾಲು ಎಂಬುದು ಲಕ್ಷಿಸಬೇಕಾದ ಅಂಶ. ಇರುವ ಎರಡು ಆದಯ್ಯನ ಗುಡಿಗಳಲ್ಲಿ ಬಳಗಾನೂರಿನದು ಸಮಾಧಿಗದ್ದುಗೆ ಎಂದು ತೋರುತ್ತದೆ. ಅಮರೇಶ್ವರದ ಆದಯ್ಯನ ದೇಗುಲ ಕುರುಹುಗದ್ದುಗೆ ಇರಬಹುದು. ಈ ಮಾತಿನ ಸಮರ್ಥನೆಗೆ ಆಧಾರಗಳು ಬೇಕು. ಆದರೂ ಅಮರಯ್ಯ ಜಲಪವಾಡದ ನಂತರ ಅದೃಶ್ಯವಾದ ಎಂಬ ಪೌರಾಣಿಕ ಹೇಳಿಕೆಗಳಿಗಿಂತ ಆತ ತನ್ನ ಸಾಕುತಂದೆತಾಯಿಗಳೊಂದಿಗೆ ಪ್ರಾಯಶಃ ಅಮರಯ್ಯನ ಮೂಲ ಊರಾಗಿದ್ದಿರಬಹುದಾದ ಬಳಾಗಾನೂರಿಗೆ ಮರಳಿದ ಎಂದೇ ನನಗೆ ತೋರುತ್ತದೆ. ಇದೊಂದು ಊಹೆ ಎಂಬುದನ್ನು ಪುನರುಚ್ಚರಿಸುತ್ತೇನೆ.

ಬಳಗಾನೂರು ಶಾಸನದಲ್ಲಿ ಅಮರಯ್ಯನ ತಂದೆ ಸ್ಥಾನದಲ್ಲಿ ವೀರಣ್ಣ ಒಡೆಯ ಎಂಬುವರ ಸ್ಮರಣೆಯಾಗಿದೆ. ಅಮರೇಶ್ವರ ಐತಿಹ್ಯ ಮತ್ತು ಪುರಾಣಗಳು ಆದಯ್ಯನನ್ನು ಸಾಕುತಂದೆ ಎಂದೇ ಹೇಳುವುದರಿಂದ ವೀರಣ್ಣ ಒಡೆಯರನ್ನು ನಿಜತಂದೆ ಎಂದಾಗಲೀ ಗುರುತಂದೆ ಎಂದಾಗಲೀ ಭಾವಿಸುವುದು ತಪ್ಪಾಗದು. ನನಗೆ ನಿಜತಂದೆ ಎಂದೇ ತೋರುತ್ತದೆ. ಚಿಕ್ಕ ವಯಸ್ಸಿಗೇ ಊರು ಬಿಟ್ಟ ಬಾಲಕ ಆದಯ್ಯನ ಆಸರೆಯಲ್ಲಿ ಅಮರಗುಂಡದ ಪರಿಸರದಲ್ಲಿ ತನ್ನ ಆತ್ಮೋನ್ನತಿ ಮಾಡಿಕೊಂಡು ಸಾಕು ತಂದೆಯೊಂದಿಗೆ ಹುಟ್ಟೂರಾದ ಬಳಗಾನೂರಿಗೆ ಮರಳಿ ಶೇಷಜೀವನವನ್ನು ಕಳೆದನೆ? ಈ ಕುರಿತು ಇದಮಿತ್ಥಂ ಎಂದು ಹೇಳಲು ಆಧಾರಗಳಿಲ್ಲವೆಂಬುದನ್ನು ಒಪ್ಪುತ್ತಲೇ ಈ ಊಹೆಯನ್ನು ತೇಲಿಬಿಡಬೇಕಾಗಿದೆ. ಅಮರೇಶ್ವರದಲ್ಲಿ ಅಮರಯ್ಯನ ಅದೃಶ್ಯದ ಮಾತಿದೆಯೇ ವಿನಾ ಲಿಂಗೈಕ್ಯದ ಮಾತಿಲ್ಲ ಎಂಬುದೂ ನನ್ನ ಊಹೆಗೆ ಸಣ್ಣ ಆಧಾರವಾಗಬಹುದು.

೨೫ ತಲೆಮಾರಗಳ ಚರಿತ್ರೆಯನ್ನು ಭೂಪುರದ ತೋಪಿನಕಟ್ಟೆ ಬೃಹನ್ಮಠದ ಶ್ರೀಗಳು ಘೋಷಿಸಿಕೊಳ್ಳುವುದರಿಂದ ೧೬ನೆಯ ಶತಮಾನದಿಂದ ಅವರ ಚರಿತ್ರೆ ಅಮರೇಶ್ವರದಲ್ಲಿ ಅದೂ ಅಮರಯ್ಯನ ಮೂಲಕ ಆರಂಭವಾಗುತ್ತದೆ, ಆದಯ್ಯನ ಮನೆಗುರುಗಳು ಎಂಬ ಕಾರಣವಾಗಿ. ವೀರಶೈವ ಗುರುವರ್ಗದ ಈ ಪೀಠಾಚಾರ್ಯರಲ್ಲಿ ಮಳೆಯ ಸ್ವಾಮಿ, ರುದ್ರಸ್ವಾಮಿ, ಶಾಂತಸ್ವಾಮಿ, ಗಜದಂಡ ಸ್ವಾಮಿ ಮೊದಲಾದ ಹೆಸರುಗಳೇ ಹೆಚ್ಚು ಎಂದು ಕೇಳಿದ್ದೇನೆ. ಇವರಲ್ಲಿ ಹಿಂದಿನ ಗಜದಂಡ ಸ್ವಾಮಿಗಳ ಬಳಿ ಸಿದ್ದಾರೂಢರು ಸಾಧನೆಗೆ ನಿಂತುದು. ಗುರುವಿಗೆ ಲೋಕಸುತ್ತುತ್ತಬಂದ ಸಿದ್ದಾರೂಢರು ಗಜದಂಡ ಸ್ವಾಮಿಗಳನ್ನು ಹುಡುಕಿಕೊಂಡು ಭೂಪುರಕ್ಕೆ ಬರಬೇಕಾದರೆ ಗಜದಂಡ

ಸ್ವಾಮಿಗಳ ಯೋಗ್ಯತೆ ನಮಗೆ ಅರ್ಥವಾಗುತ್ತದೆ. ನಮ್ಮ ಅಧ್ಯಯನ ಈ ಸಂಗತಿಯನ್ನು ಗಮನಿಸಿದೆ.

ಕಾಯಕ ಸಿದ್ಧಾಂತಕ್ಕೆ ಹೆಸರಾದ ಹನ್ನೆರಡನೆಯ ಶತಮಾನದ ಆಯ್ದಕ್ಕಿ ಮಾರಯ್ಯ-ಲಕ್ಕಮ್ಮರು ಅಮರೇಶ್ವರ ಕ್ಷೇತ್ರದವರು ಎನ್ನಲು ನನಗೆ ಹಿಂದೇಟು. ಅದಕ್ಕೆ ಕಾರಣ ನಮ್ಮ ವಿದ್ವಾಂಸರು ಮುಂದೆ ಮಾಡಿದ ಕಾರಣಗಳು. ಈ ಶರಣ ದಂಪತಿಗಳ ವಚನಾಂಕಿತದಲ್ಲಿ ಅಮರೇಶ್ವರಲಿಂಗ ಎಂಬ ಪಾಠ ಇರುವುದನ್ನು ಬಲವಾಗಿ ಒಪ್ಪಿರುವ ವಿದ್ವಾಂಸರು ಆ ಹೆಸರಲ್ಲಿ ಇರುವ ಅಮರೇಶ್ವರವನ್ನು ಇದೇ ಕ್ಷೇತ್ರವೆಂದು ಭಾವಿಸಿಬಿಟ್ಟರು. ಆದರೆ ಕರಡಿಕಲ್ಲು ಶಾಸನವನ್ನು ನಾನು ಅಧ್ಯಯನಕ್ಕೆ ಒಳಪಡಿಸಲಾಗಿ ಆಗ ಇಲ್ಲಿ ಅಮರೇಶ್ವರ ಕ್ಷೇತ್ರವೇ ಇದ್ದಿರಲಿಲ್ಲ, ಇದ್ದುದು ಅಮರಗುಂಡ ಮಲ್ಲಿಕಾರ್ಜುನ ಕ್ಷೇತ್ರ ಎಂಬುದು ಸಿದ್ಧವಾದಮೇಲೆ ಆಯ್ದಕ್ಕಿ ಶರಣರು ಅಮರೇಶ್ವರದವರು ಎಂಬ ಅಂಶ ಬಿದ್ದುಹೋಗುತ್ತದೆ. ರಾಯಚೂರು ಜಿಲ್ಲೆಯ ಶರಣರಲ್ಲಿ ಅವರನ್ನು ಗಣಿಸುವುದನ್ನು ನನ್ನ ಈ ಸಂಶೋಧನೆ ಕಾರಣವಾಗಿ ಇನ್ನುಮುಂದೆ ನಿಲ್ಲಿಸಬೇಕಾಗಿಬರುತ್ತದೆ. ಅವರ ವಚನಾಂಕಿತಕ್ಕೆ 'ಅಮಳೇಶ್ವರ ಲಿಂಗ' ಎಂಬ ಪಾಠವಿದ್ದು ಅದೇ ನಿಜಪಾಠವಾಗಿ ತೋರುತ್ತದೆ. ಹೀಗೆ ಅಮರೇಶ್ವರ ಚರಿತ್ರಶೋಧವನ್ನು ಗುರಿಯಾಗಿ ಇಟ್ಟುಕೊಂಡ ಈ ಪ್ರಬಂಧವು ಆನುಷಂಗಿಕವಾಗಿ ಆಯ್ದಕ್ಕಿ ಶರಣರ ನೆಲೆಯ ಮೇಲೆ ನಿಜಬೆಳಕು ಚೆಲ್ಲಿದ್ದು ಒಂದು ಸಾಧನೆ ಎಂದು ಭಾವಿಸುತ್ತೇನೆ.

ಹೀಗೆ ಶೋಧನೆಯನ್ನು ಪ್ರತಿ ಹೆಜ್ಜೆಗೆ ಅನುಸರಿಸಿದ ಈ ಅಧ್ಯಯನವು ಮಹತ್ವದ ಅಧ್ಯಯನವೆಂದು ಬಗೆಯುತ್ತೇನೆ. ಇದು ಇನ್ನಷ್ಟು ಆಳದ ಸತ್ಯದ ಪ್ರಕಟಣೆಗೆ ಅನುವುಮಾಡಿಕೊಡಲಿ ಎಂದು ಆಶಿಸುತ್ತೇನೆ.

-Dr.BASAVALINGAYYA SOPPIMATH

Principal investigator

## ಚಿತ್ರಗಳು



ಅಮರೇಶ್ವರ ದೇವಸ್ಥಾನದ ಮಹಾದ್ವಾರ



ಅಮರೇಶ್ವರ ದೇವಸ್ಥಾನದ ಗರ್ಭಗುಡಿ; ಅಮರೇಶ್ವರ ಲಿಂಗ



ಅಮರೇಶ್ವರದ ಗುರುಗಳ ಸಮಾಧಿಗಳು (ಅಮರೇಶ್ವರ ಕ್ಷೇತ್ರ)



ಸಿದ್ಧಾರೂಢರು ಕುಳಿತುಕೊಳ್ಳುತ್ತಿದ್ದ ಕಲ್ಲುಬಂಡೆ (ದೇವರ ಭೂಪುರ)